# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿ.ಇ/203/2020//ಎಆರ್‌ಇ-10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 10/02/2022.

## ವಿಚಾರಣಾ ವರದಿ

**ಉಪಸ್ಥಿತರು:** **ಜಿ. ನಂಜುಂಡಯ್ಯ**, ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ-1 **ಶ್ರೀ ಹಣಮಂತ, ಕಿರಿಯ ಇಂಜಿನಿಯರ್**, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಯಾದಗಿರಿ ಜಿಲ್ಲೆ (ಏಕತರ್ಫಿ), **ಆ.ಸ.ನೌ-2 ಶ್ರೀ ಹನುಮಂತಪ್ಪ ಅಂಬಲಿ**, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸುರಪುರ, ಯಾದಗಿರಿ ಜಿಲ್ಲೆ (ಏಕತರ್ಫಿ) ಮತ್ತು **ಆ.ಸ.ನೌ-3 ಶ್ರೀ ಮೊಹಮದ್ ಸಾದಿಕ್ ಅಲಿ ಬಕ್ರಿ**, ಕಿರಿಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ, ಯಾದಿಗಿರಿ ಜಿಲ್ಲೆ **(quashed)** ರವರುಗಳ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ:** **1.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ-1099/2017/ಸನಿಕಾಸ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 29/09/2020.**
2.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/62/ಇಎನ್‌ಕ್ಯೂ/2020 ಬೆಂಗಳೂರು, ದಿನಾಂಕ: 06/11/2020.
3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ-203/2020, ಬೆಂಗಳೂರು ದಿನಾಂಕ: 17.11.2020.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, **ದೂರುದಾರರಾದ ಶ್ರೀ. ಭೀಮರಾಯ** ಬಿನ್ ಭೋಜಪ್ಪ ಕಡಿಮನಿ, ಅರಕೇರ (ಕೆ) ಗ್ರಾಮ, ಲಕ್ಷ್ಮೀಪುರ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ರವರು (1) **ಶ್ರೀ ಹಣಮಂತ, ಕಿರಿಯ ಅಭಿಯಂತರರು**, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ,

ಯಾದಗಿರಿ ಜಿಲ್ಲೆ (2) **ಶ್ರೀ ಹನುಮಂತಪ್ಪ ಅಂಬಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್,** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸುರಪುರ, ಯಾದಗಿರಿ ಜಿಲ್ಲೆ ಮತ್ತು **ಆ.ಸ.ನೌ–3 ಶ್ರೀ ಮೊಹಮದ್ ಸಾದಿಕ್ ಅಲಿ ಬಕ್ರಿ,** ಕಿರಿಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ, ಯಾದಿಗಿರಿ ಜಿಲ್ಲೆ ( ಇನ್ನು ಮುಂದೆ ಕ್ರಮವಾಗಿ **ಆ.ಸ.ನೌ–1 ರಿಂದ 3** ಎಂದು ಕರೆಯಲ್ಪಡುವರು) ರವರ ವಿರುದ್ಧ ದೂರು ಸಲ್ಲಿಸಿ ಸದರಿ ದೂರಿನಲ್ಲಿ 2015–16 ನೇ ಸಾಲಿನ ತಾಲ್ಲೂಕು ಪಂಚಾಯತಿ ಅನಿರ್ಬಂಧಿತ ಅನುದಾನ ಯೋಜನೆ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಯಾದ ಆಲ್ದಾಳ ಗ್ರಾಮದ ಎಸ್.ಸಿ. ಓಣಿಯ ಬಾವಿಯಿಂದ ಆಗಸಿವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ, (ಕಾಮಗಾರಿಯ ಅಂದಾಜು ಮೊತ್ತ ರೂ. 3,00,000/–) ನಿರ್ವಹಿಸಲಾಗಿದೆ ಎಂದು ಬಿಲ್ ಮಾಡಲಾದ ಮೊತ್ತ ರೂ. 2,96,486/–, 2014–15ನೇ ಸಾಲಿನ ಜಿಲ್ಲಾ ಪಂಚಾಯತ್ (ಇಂ) ವಿಭಾಗದಡಿಯಲ್ಲಿ ಬಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಕೈಗೊಂಡ ಸುರಪುರ ತಾಲ್ಲೂಕಿನ ಆಲ್ದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಂಪೌಂಡ್ ಗೋಡೆ ಕಟ್ಟಡ ಕಾಮಗಾರಿ, ಕಾಮಗಾರಿಯ ಅಂದಾಜು ಮೊತ್ತ ರೂ. 3,50,000/– ಕಾಮಗಾರಿ ನಿರ್ವಹಿಸಲಾಗಿದೆ ಎಂದು ಬಿಲ್ ಮಾಡಲಾದ ಮೊತ್ತ ರೂ. 3,40,471/– ಹಾಗೂ 2014–15 ನೇ ಸಾಲಿನ ಜಿಲ್ಲಾ ಪಂಚಾಯತ್ (ಇಂ) ವಿಭಾಗದಡಿಯಲ್ಲಿ ಬಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಕೈಗೊಂಡ ಹಾವಿನಾಳ ಗ್ರಾಮದ ನಿಂಗಪ್ಪ, ಹರಿಜನ ರವರ ಮನೆಯಿಂದ ವಿನೋದ ಸಾಳೊಂಕಿ ರವರ ಮನೆಯವರೆಗೆ ಸಿ.ಸಿ. ರಸ್ತೆ ನಿರ್ಮಾಣ ಮಾಡುವುದು, ಕಾಮಗಾರಿಯ ಅಂದಾಜು ಮೊತ್ತ ರೂ. 3,00,000/– ಕಾಮಗಾರಿ ನಿರ್ವಹಿಸಲಾಗಿದೆ ಎಂದು ಬಿಲ್ ಮಾಡಲಾದ ಮೊತ್ತ ರೂ. 2,97,517/– ಈ ದೂರಿನ ಕುರಿತು ತನಿಖೆಗೆ ಆದೇಶಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿ ಶ್ರೀ ಬಿ.ಬಿ. ಪಟೇಲ್, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಯಾದಗಿರಿ ರವರು ತನಿಖೆ ಕೈಗೊಂಡು ತನಿಖಾ ವರದಿ ಸಲ್ಲಿಸಿದ್ದು, ಸದರಿ ವರದಿಯ ಮೇಲೆ 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, 2 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ, ದಾಖಲೆಗಳ ಪರಿಶೀಲನೆಯ ನಂತರ ಆ.ಸ.ನೌ.–1 ರಿಂದ 3 ರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1) ರಡಿಯಲ್ಲಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿ ಅನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ 06/11/2020 ರಂದು ಮಾನ್ಯ ಉಪಲೋಕಾಯುಕ್ತ–1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ

ಉಪಲೋಕಾಯುಕ್ತ-1 ರವರು ದಿನಾಂಕ 17/11/2020 ರಂದು ಅಪರ ನಿಬಂಧಕರು, ವಿಚಾರಣೆಗಳ-10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಾಮನಿರ್ದೇಶನ ಮಾಡಿರುತ್ತಾರೆ.

2) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ-1 ರಿಂದ 3 ರವರುಗಳ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು-10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆ.ಸ.ನೌ-1 ರಿಂದ 3** ರವರುಗಳಿಗೆ ದಿನಾಂಕ 02/11/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ-1**
**ದೋಷಾರೋಪಣೆ**
**(CHARGE)**

ಆಪಾದಿತ ಸರ್ಕಾರಿ ನೌಕರ – 1) ಶ್ರೀ ಹಣಮಂತ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಯಾದಗಿರಿ ಜಿಲ್ಲೆ 2) ಶ್ರೀ ಹನುಮಂತಪ್ಪ ಅಂಬಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸುರಪುರ, ಯಾದಗಿರಿ ಜಿಲ್ಲೆ ಹಾಗೂ 3) ಶ್ರೀ ಮೊಹಮದ್ ಸಾದಿಕ್ ಅಲಿ ಬಕ್ರಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸುರಪುರ, ಯಾದಗಿರಿ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ 1 ರಿಂದ 3 ಎಂದು ಕ್ರಮವಾಗಿ ಸಂಭೋದಿಸಲಾಗುವ) ಆದ ನೀವುಗಳು, ಈ ಕೆಳಕಂಡಂತೆ ಕರ್ತವ್ಯ ಲೋಪವೆಸಗಿರುತ್ತೀರಿ :-

1) 2015-16ನೇ ಸಾಲಿನ ತಾಲ್ಲೂಕು ಪಂಚಾಯತ್ ಅನಿರ್ಬಂಧಿತ ಯೋಜನೆ ಅಡಿಯಲ್ಲಿ ಅಲ್ದಾಳ ಗ್ರಾಮದಲ್ಲಿ ಎಸ್.ಸಿ. ಓಣಿಯ ಬಾವಿಯಿಂದ ಅಗಸಿವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು, 2011-12ನೇ ಸಾಲಿನಲ್ಲಿ ಸೌತ್-ವೆಸ್ಟ ಹೈಡ್ರೊ ಪವರ್ ಪ್ರೈ.ಲಿ ಕಂಪನಿಯವರು ನಿರ್ಮಾಣ ಮಾಡಿದ ಎಸ್.ಸಿ. ಓಣಿಯ ಬಾವಿಯಿಂದ ಅಗಸಿವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯ ಪೋಟೋಗಳನ್ನು ಲಗತ್ತಿಸಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೆಂದು ದಾಖಲಾತಿಗಳನ್ನು ತಯಾರಿಸಿ ಗುತ್ತಿಗೆದಾರರಿಗೆ ಕಾಮಗಾರಿಯ ನಿರ್ವಹಣ ವೆಚ್ಚ ರೂ.2,96,486/- ಗಳನ್ನು ಪಾವತಿಸಿರುತ್ತೀರಿ.

2) ದೂರಿನ 2ನೇ ಕಾಮಗಾರಿಯಾದ 2014-15ನೇ ಸಾಲಿನ ಜಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಆಲ್ದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ನಿರ್ವಹಿಸಲಾಗಿದೆಯೆಂದು, ಮುಷ್ಠೂರು ದೊಡ್ಡಿ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್

ಗೋಡೆಯ ಪೋಟೊಗಳನ್ನು ಲಗತ್ತಿಸಿ ಕಾಮಗಾರಿಯನ್ನು ನಿರ್ವಹಿಸುವಂತೆ ದಾಖಲೆಗಳನ್ನು ತಯಾರಿಸಿ ಗುತ್ತಿಗೆದಾರರಿಗೆ ಕಾಮಗಾರಿ ನಿರ್ವಹಣ ವೆಚ್ಚ ರೂ.3,40,471/- ಗಳನ್ನು ಪಾವತಿಸಿರುತ್ತೀರಿ ಮತ್ತು

3) 3ನೇ ಕಾಮಗಾರಿ 2014-15ನೇ ಸಾಲಿನ ಬಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಹಾವಿನಾಳ ಗ್ರಾಮದ ನಿಂಗಪ್ಪ ಹರಿಜನ ರವರ ಮನೆಯಿಂದ ವಿನೋದ ಸಾಳಂಕಿ ರವರ ಮನೆಯವರೆಗೆ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ ನಿರ್ವಹಿಸಲಾಗಿದೆಯೆಂದು, ಅಲ್ದಾಳ ಗ್ರಾಮದ ತಿಪ್ಪಣ್ಣ ಬಿನ್ ಭೀಮಣ್ಣ ಹಬ್ಲಿ ರವರ ಮನೆಯ ಮುಂದೆ ಈ ಹಿಂದೆ ನಿರ್ಮಿಸಲಾದ ಸಿ.ಸಿ.ರಸ್ತೆಯ ಕಾಮಗಾರಿ ಪೋಟೊಗಳನ್ನು ಲಗತ್ತಿಸಿ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು ದಾಖಲಾತಿಗಳನ್ನು ತಯಾರಿಸಿ ಕಾಮಗಾರಿ ನಿರ್ವಹಣ ವೆಚ್ಚ ರೂ.2,92,517/- ಗಳನ್ನು ಗುತ್ತಿಗೆದಾರರಿಗೆ ಪಾವತಿಸಿರುತ್ತೀರಿ.

ಆದಕಾರಣ, ಸರ್ಕಾರಿ ಆಪಾದಿತ ನೌಕರರಾದ ನೀವುಗಳು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(1)(i) ರಿಂದ (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

## (Statement of Imputations of misconduct)

### ದೂರಿನ ಸಂಕ್ಷಿಪ್ತ ವಿವರಣೆ:-

3. ದೂರಿನ ಸಂಕ್ಷಿಪ್ತ ಸಾರಾಂಶ:- ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ, ಅಲ್ದಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಅಲ್ದಾಳ ಮತ್ತು ಹಾವಿನಾಳ ಗ್ರಾಮಗಳಲ್ಲಿ ಎದುರುದಾರರು ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕಾಮಗಾರಿಯನ್ನು ನಿರ್ವಹಿಸದೆ, ಬೇರೆ ಗ್ರಾಮದಲ್ಲಿ ನಿರ್ವಹಿಸಿರುವ ಕಾಮಗಾರಿಗಳ ಪೋಟೋಗಳನ್ನು ಲಗತ್ತಿಸಿ ಬೋಗಸ್ ಬಿಲ್ಲನ್ನು ಮಾಡಿ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ ಎಂದು ಆರೋಪಿಸಿ ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿಕೊಂಡಿರುತ್ತಾರೆ.

ಕಾಮಗಾರಿ ಸಂಖ್ಯೆ 1 :- 2015-16 ನೇ ಸಾಲಿನ ತಾಲ್ಲೂಕು ಪಂಚಾಯತಿ ಅನಿರ್ಬಂಧಿತ ಅನುದಾನ ಯೋಜನೆ ಅಡಿಯಲ್ಲಿ ಕೈಗೊಂಡಿರುವ ಕಾಮಗಾರಿಯಾದ ಅಲ್ದಾಳ ಗ್ರಾಮದ ಎಸ್.ಸಿ. ಓಣಿಯ ಬಾವಿಯಿಂದ

ಅಗಸಿವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ, ಕಾಮಗಾರಿಯ ಅಂದಾಜು ಮೊತ್ತ ರೂ.3,00,000/– ಕಾಮಗಾರಿ ನಿರ್ವಹಿಸಲಾಗಿದೆ ಎಂದು ಬಿಲ್ ಮಾಡಲಾದ ಮೊತ್ತ ರೂ.2,96,486/–.

ಕಾಮಗಾರಿ ಸಂಖ್ಯೆ 2 :– 2014–15 ನೇ ಸಾಲಿನ ಜಿಲ್ಲಾ ಪಂಚಾಯತ್ (ಇಂ) ವಿಭಾಗದಡಿಯಲ್ಲಿ ಬಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಕೈಗೊಂಡ ಸುರಪುರ ತಾಲ್ಲೂಕಿನ ಆಲ್ದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಾಂಪೌಂಡ್ ಗೋಡೆ ಕಟ್ಟಡ ಕಾಮಗಾರಿ, ಕಾಮಗಾರಿಯ ಅಂದಾಜು ಮೊತ್ತ ರೂ.3,50,000/– ಕಾಮಗಾರಿ ನಿರ್ವಹಿಸಲಾಗಿದೆ ಎಂದು ಬಿಲ್ ಮಾಡಲಾದ ಮೊತ್ತ ರೂ.3,40,471/.

ಕಾಮಗಾರಿ ಸಂಖ್ಯೆ 3 :– 2014–15 ನೇ ಸಾಲಿನ ಜಿಲ್ಲಾ ಪಂಚಾಯತ್ (ಇಂ) ವಿಭಾಗದಡಿಯಲ್ಲಿ ಬಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಕೈಗೊಂಡ ಹಾವಿನಾಳ ಗ್ರಾಮದ ನಿಂಗಪ್ಪ, ಹರಿಜನ ರವರ ಮನೆಯಿಂದ ವಿನೋದ ಸಾಳೊಂಕಿ ರವರ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಾಣ ಮಾಡುವುದು, ಕಾಮಗಾರಿಯ ಅಂದಾಜು ಮೊತ್ತ ರೂ.3,00,000/–, ಕಾಮಗಾರಿ ನಿರ್ವಹಿಸಲಾಗಿದೆ ಎಂದು ಬಿಲ್ ಮಾಡಲಾದ ಮೊತ್ತ ರೂ.2,97,517/–.

4. ದೂರುದಾರರು ನೀಡಿದ ದೂರಿನ ಮೇರೆಗೆ ಎದುರುದಾರರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಂತೆ ಪ್ರಕರಣದ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

5. ದೂರು ಮತ್ತು ಅದರೊಂದಿಗೆ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಪ್ರಸ್ತುತ ಪ್ರಕರಣದಲ್ಲಿ ಸ್ಥಳ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೋಲೀಸ್, ಯಾದಗಿರಿ ಜಿಲ್ಲೆ ರವರಿಗೆ ನಿರ್ದೇಶಿಸಲಾಗಿರುತ್ತದೆ. ತನಿಖಾಧಿಕಾರಿ, ಶ್ರೀ. ಬಿ.ಬಿ. ಪಟೇಲ್, ಪೋಲೀಸ್ ಇನ್ಸಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಯಾದಗಿರಿ ಜಿಲ್ಲೆ ರವರು ತನಿಖೆ ಕೈಗೊಂಡು ತನಿಖಾ ವರದಿಯನ್ನು ದಿನಾಂಕ 15/02/2017 ರಂದು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಯಾದಗಿರಿ ಜಿಲ್ಲೆ ಇವರು ಸಲ್ಲಿಸಿರುತ್ತಾರೆ. ತನಿಖಾಧಿಕಾರಿಯವರ ತನಿಖಾ ವರದಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

1) ಅಲ್ದಾಳ ಗ್ರಾಮದ ಎಸ್.ಸಿ. ಓಣಿಯಿಂದ ಅಗಸಿಯವರೆಗೆ ಕೈಗೊಂಡ ಪೈಪ್‌ಲೈನ್ ಕಾಮಗಾರಿಯನ್ನು ಸನ್ 2012ನೇ ಸಾಲಿನಲ್ಲಿ ಪವರ್ ಪ್ಲ್ಯಾಂಟ್ ನವರು ಕೈಗೊಂಡಿದ್ದು ಇರುತ್ತದೆ. ಆದರೆ 2015–16ನೇ ಸಾಲಿನ ತಾಲ್ಲೂಕ ಪಂಚಾಯತಿಯ ಅನಿರ್ಬಂಧಿತ ಅನುದಾನದ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ಕೈಗೊಳ್ಳದೆ ಬೋಗಸ್ ಬಿಲ್ಲುಗಳನ್ನು ತಯಾರಿಸಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು ಕಂಡುಬಂದಿದ್ದು ಇರುತ್ತದೆ.

2) 2014–15ನೇ ಸಾಲಿನ ಜಿಲ್ಲಾ ಪಂಚಾಯತ (ಇಂ) ವಿಭಾಗದಲ್ಲಿ ಬಿ.ಆರ್.ಜಿ.ಎಫ್.ಯೋಜನೆಯಡಿಯಲ್ಲಿ ಸುರಪುರ ತಾಲ್ಲೂಕಿನ ಅಲ್ದಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಕಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ಕೈಗೊಳ್ಳದೆ ಮುಷ್ಟೂರು ದೊಡ್ಡಿಯ ಕಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಗೋಡೆಯ ಛಾಯಾಚಿತ್ರವನ್ನು ಈ ಕಾಮಗಾರಿ ದಾಖಲಾತಿಗಳಿಗೆ ಲಗತ್ತಿಸಿ, ಬೋಗಸ್ ಬಿಲ್ಲುಗಳನ್ನು ತಯಾರಿಸಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು ಕಂಡುಬಂದಿರುತ್ತದೆ.

3) 2014–15ನೇ ಸಾಲಿನ ಜಿಲ್ಲಾ ಪಂಚಾಯತ (ಇಂ) ವಿಭಾಗದಲ್ಲಿ ಬಿ.ಆರ್.ಜಿ.ಎಫ್. ಯೋಜನೆಯಡಿಯಲ್ಲಿ ಸುರಪುರ ತಾಲ್ಲೂಕಿನ ಹಾವಿನಾಳ ಗ್ರಾಮದ ನಿಂಗಪ್ಪ ಹರಿಜನ ಮನೆಯಿಂದ ವಿನೋದ ಸಾಳಂಕಿ ರವರ ಮನೆಯವರೆಗೆ ಸಿ.ಸಿ.ರಸ್ತೆ ಕಾಮಗಾರಿಯನ್ನು ಕೈಗೊಳ್ಳದೆ ಅಲ್ದಾಳ ಗ್ರಾಮದ ತಿಪ್ಪಣ್ಣ ತಂದೆ ಭೀಮಣ್ಣ ಹಬ್ಬಿ, ಸಾ: ಅಲ್ದಾಳ ರವರ ಮನೆಯ ಮುಂದುಗಡೆ ಈ ಹಿಂದೆ ನಿರ್ಮಿಸಿದ ಸಿ.ಸಿ.ರಸ್ತೆಯ ಕಾಮಗಾರಿಯ ಪೋಟೋವನ್ನು ಬಿಲ್ಲಿಗೆ ಲಗತ್ತಿಸಿ, ಬೋಗಸ್ ಬಿಲ್ಲುಗಳನ್ನು ತಯಾರಿಸಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದು ಕಂಡುಬಂದಿದ್ದು ಇರುತ್ತದೆ.

6. ಆರೋಪಗಳಿಗೆ ಸಂಬಂಧಿಸಿದಂತೆ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶ ನೀಡಲಾಗಿದ್ದು, ಎದುರುದಾರರ ಸಂಖ್ಯೆ 1 ಮತ್ತು 4 ರವರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಎದುರುದಾರರ ಸಂಖ್ಯೆ 2 ಮತ್ತು 3 ರವರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

7. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಆರೋಪಗಳನ್ನು ಅಲ್ಲಗಳೆಯುತ್ತಾರೆ. ಮುಂದುವರೆದು ದೂರಿನಲ್ಲಿ ಹೇಳಲಾದಂತಹ ಕಾಮಗಾರಿಗಳನ್ನು 2015–16ನೇ ಸಾಲಿನಲ್ಲಿ ಕೈಗೆತ್ತಿಕೊಂಡಿರುವುದಾಗಿ ಹೇಳುತ್ತಾರೆ. ಕಾಮಗಾರಿಯನ್ನು ಪೂರ್ಣಗೊಳಿಸಿ ಅಳತೆ ಪುಸ್ತಕದಲ್ಲಿ ನಮೂದು ಮಾಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಂದ ರುಜು ಪಡೆದು ತಾಲ್ಲೂಕು ಪಂಚಾಯತ್ ಕಾರ್ಯಾಲಯಕ್ಕೆ ಹಣ ಪಾವತಿಗಾಗಿ ಸಲ್ಲಿಸಲಾಗಿರುತ್ತದೆ, ಇದರಲ್ಲಿ ಯಾವುದೇ ತರಹದ ಹಣ ದುರುಪಯೋಗ ಅಥವಾ ಅವ್ಯವಹಾರ ಆಗಿರುವುದಿಲ್ಲ ಎಂದು ಹೇಳುತ್ತಾರೆ.

8. 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿ ಹೇಳಿರುವ ಕಾಮಗಾರಿಗಳನ್ನು ಗುತ್ತಿಗೆದಾರರಾಗಿ ನಿರ್ವಹಿಸಿರುವುದಾಗಿ, ತಾನು ಗ್ರಾಮ ಪಂಚಾಯತಿ ಅಧ್ಯಕ್ಷನಾಗುವ ಮೊದಲು ಸದರಿ ಕಾಮಗಾರಿಗಳ ನಿರ್ವಹಣೆಗಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ಹೇಳಿರುತ್ತಾರೆ. ಮುಂದುವರೆದು ಸದರಿ ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ

ನಿಗದಿತ ಸಮಯದಲ್ಲಿ ನಿರ್ವಹಿಸಿರುತ್ತೇನೆ, ದೂರುದಾರರು ಮಾಡಿರುವ ಆರೋಪ ಸುಳ್ಳಾಗಿದ್ದು ತನಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ.

9. ತನಿಖಾವರದಿ ಮತ್ತು ತನಿಖಾಧಿಕಾರಿಗಳು ತನಿಖೆ ವೇಳೆ ಸಂಗ್ರಹಿಸಿದ ದಾಖಲಾತಿಗಳು ಹಾಗೂ ಸ್ಥಳೀಯರ ಹೇಳಿಕೆಗಳನ್ನು ಪರಿಶೀಲಿಸಲಾಯಿತು, ಮುಖ್ಯವಾಗಿ ಸೌತ್–ವೆಸ್ಟ ಹೈಡ್ರೊ ಪವರ್ ಪ್ರೈ.ಲಿ ಕಂಪನಿ ರವರು ನೀಡಿರುವ ಮಾಹಿತಿ ಪತ್ರ, ತನಿಖಾಧಿಕಾರಿ ತನಿಖಾ ವೇಳೆ ಜರುಗಿಸಿದ ಪಂಚನಾಮೆ ಮತ್ತು ಪೋಟೋಗಳನ್ನು ಪರಿಶೀಲಿಸಲಾಗಿ ಎದುರುದಾರರ ಸಂಖ್ಯೆ 1 ರಿಂದ 3 ರವರು

1) 2015–16ನೇ ಸಾಲಿನ ತಾಲ್ಲೂಕು ಪಂಚಾಯತ್ ಅನಿರ್ಬಂಧಿತ ಯೋಜನೆ ಅಡಿಯಲ್ಲಿ ಅಲ್ದಾಳ ಗ್ರಾಮದಲ್ಲಿ ಎಸ್.ಸಿ. ಓಣಿಯ ಬಾವಿಯಿಂದ ಅಗಸಿವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು, 2011–12ನೇ ಸಾಲಿನಲ್ಲಿ ಸೌತ್–ವೆಸ್ಟ ಹೈಡ್ರೊ ಪವರ್ ಪ್ರೈ.ಲಿ ಕಂಪನಿಯವರು ನಿರ್ಮಾಣ ಮಾಡಿದ ಎಸ್.ಸಿ. ಓಣಿಯ ಬಾವಿಯಿಂದ ಅಗಸಿವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯ ಪೋಟೋಗಳನ್ನು ಲಗತ್ತಿಸಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೆಂದು ದಾಖಲಾತಿಗಳನ್ನು ತಯಾರಿಸಿ ಗುತ್ತಿಗೆದಾರರಾದ 4ನೇ ಎದುರುದಾರರಿಗೆ ಕಾಮಗಾರಿಯ ನಿರ್ವಹಣ ವೆಚ್ಚ ರೂ.2,96,486/– ಗಳನ್ನು ಪಾವತಿಸಿರುವುದು,

2) ದೂರಿನ 2ನೇ ಕಾಮಗಾರಿಯಾದ 2014–15ನೇ ಸಾಲಿನ ಜಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಅಲ್ದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ನಿರ್ವಹಿಸಲಾಗಿದೆಯೆಂದು, ಮುಷ್ಠೂರು ದೊಡ್ಡಿ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಗೋಡೆಯ ಪೋಟೊಗಳನ್ನು ಲಗತ್ತಿಸಿ ಕಾಮಗಾರಿಯನ್ನು ನಿರ್ವಹಿಸುವಂತೆ ದಾಖಲೆಗಳನ್ನು ತಯಾರಿಸಿ 4ನೇ ಎದುರುದಾರರಿಗೆ ಕಾಮಗಾರಿ ನಿರ್ವಹಣ ವೆಚ್ಚ ರೂ.3,40,471/– ಗಳನ್ನು ಪಾವತಿಸಿರುವುದು ಮತ್ತು,

3) 3ನೇ ಕಾಮಗಾರಿ 2014–15ನೇ ಸಾಲಿನ ಬಿ.ಆರ್.ಜಿ.ಎಫ್ ಯೋಜನೆ ಅಡಿಯಲ್ಲಿ ಹಾವಿನಾಳ ಗ್ರಾಮದ ನಿಂಗಪ್ಪ ಹರಿಜನ ರವರ ಮನೆಯಿಂದ ವಿನೋದ ಸಾಳಂಕಿ ರವರ ಮನೆಯವರೆಗೆ ಸಿ.ಸಿ.ರಸ್ತೆ ನಿರ್ಮಾಣ ಕಾಮಗಾರಿ ನಿರ್ವಹಿಸಲಾಗಿದೆಯೆಂದು, ಅಲ್ದಾಳ ಗ್ರಾಮದ ತಿಪ್ಪಣ್ಣ ಬಿನ್ ಭೀಮಣ್ಣ ಹಬ್ಲಿ ರವರ ಮನೆಯ ಮುಂದೆ ಈ ಹಿಂದೆ ನಿರ್ಮಿಸಲಾದ ಸಿ.ಸಿ.ರಸ್ತೆಯ ಕಾಮಗಾರಿ ಪೋಟೊಗಳನ್ನು ಲಗತ್ತಿಸಿ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು ದಾಖಲಾತಿಗಳನ್ನು ತಯಾರಿಸಿ ಕಾಮಗಾರಿ ನಿರ್ವಹಣ ವೆಚ್ಚ ರೂ.2,92,517/– ಗಳನ್ನು 4ನೇ ಎದುರುದಾರರಿಗೆ ಪಾವತಿಸಿರುವುದು ರುಜುವಾತಾಗಿರುತ್ತದೆ.

10. ಈ ಮೇಲೆ ಹೇಳಿದಂತೆ 1 ರಿಂದ 3ನೇ ಎದುರುದಾರರು ಈ ಮೇಲೆ ಹೇಳಲಾದ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಎಂದು ಸುಳ್ಳು ದಾಖಲೆಗಳನ್ನು ತಯಾರಿಸಿ 4ನೇ ಎದುರುದಾರರೊಂದಿಗೆ ಶಾಮೀಲಾಗಿ ಯಾವುದೇ ಕಾಮಗಾರಿಯನ್ನು ನಿರ್ವಹಿಸದೆ ಗುತ್ತಿಗೆದಾರರಾದ 4ನೇ ಎದುರುದಾರರಿಗೆ ಹಣ ಪಾವತಿ ಮಾಡಿ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ತನಿಖಾಧಿಕಾರಿಯ ವರದಿ ಮತ್ತು ದಾಖಲಾತಿಯಿಂದ ಕಂಡು ಬರುತ್ತದೆ.

11. ಈ ಮೇಲೆ ಹೇಳಿದ ಕಾರಣಗಳ ಹಿನ್ನಲೆಯಲ್ಲಿ ಎದುರುದಾರರು ಸರ್ಕಾರಿ ನೌಕರರಾಗಿ ಕಾರ್ಯನಿರ್ವಹಿಸುವಾಗ ಸುಳ್ಳು ದಾಖಲಾತಿಗಳನ್ನು ತಯಾರು ಮಾಡಿ ಕಾಮಗಾರಿ ನಿರ್ವಹಿಸಿದಂತೆ ತೋರಿಸಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಡಿರುವುದು ಕರ್ತವ್ಯಲೋಪವಾಗಿರುತ್ತದೆ. 1 ರಿಂದ 3ನೇ ಎದುರುದಾರರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ತವ್ಯಲೋಪ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಿಗಳು, 1966 ಕಲಂ 3(1) ಅನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಕಂಡು ಬರುವುದರಿಂದ ಶ್ರೀ. ಹಣಮಂತ, ಕಿರಿಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ-ವಿಭಾಗ, ಯಾದಗಿರಿ ಜಿಲ್ಲೆ, ಶ್ರೀ.ಹನುಮಂತಪ್ಪ ಅಂಬಲಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ಉಪವಿಭಾಗ, ಸುರಪುರ, ಯಾದಗಿರಿ, ಶ್ರೀ. ಮೊಹಮದ್ ಸಾದಿಕ್ ಅಲಿ ಬಕ್ರಿ, ಕಿರಿಯ ಅಭಿಯಂತರರು, ಸ.ಕಾ.ಅಭಿಯಂತರರು ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್, ಉಪ-ವಿಭಾಗ, ಸುರಪುರ, ಯಾದಗಿರಿ ಜಿಲ್ಲೆ, ರವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಿ, ವಿವರವಾದ ಇಲಾಖಾ ವಿಚಾರಣೆ ನಡೆಸಲು ಹಾಗೂ 4ನೇ ಎದುರುದಾರ ಶ್ರೀ.ವೈಜನಾಥ ಬಿನ್ ಮಾನಪ್ಪ ಹುದ್ದಾರ್, ಅಂದಿನ ಅಧ್ಯಕ್ಷರು/ ಗುತ್ತಿಗೆದಾರರು, ಆಲ್ದಾಳ ಗ್ರಾಮ ಪಂಚಾಯತ್, ಸುರುಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ರವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂದ ಮತ್ತು ಮೇಲ್ಮನವಿ) ನಿಯಮಗಳು,1957 ರ ನಿಯಮ 14-ಎ ರ ಅಡಿಯಲ್ಲಿ ವಿವರವಾದ ಇಲಾಖಾ ವಿಚಾರಣೆ ನಡೆಸಲು ಎದುರುದಾರರ ಸಂಖ್ಯೆ 1 ರಿಂದ 3 ರವರ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ವಹಿಸಿಕೊಡುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ಅಡಿಯಲ್ಲಿ ದತ್ತವಾದ ಅಧಿಕಾರಿದಿಂದ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, ಆಪಾದಿತ ಸರ್ಕಾರಿ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು-10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ಆ.ಸ.ನೌ-1 ರಿಂದ 3 ರವರುಗಳ ವಿರುದ್ಧ ಈ ಮೇಲ್ಕಂಡ ದೋಷಾರೋಪಣೆ.**

3) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ-1 ರಿಂದ 3 ರವರುಗಳಿಗೆ ಕಳುಹಿಸಿದ್ದು, ಆ.ಸ.ನೌ-1 ಮತ್ತು 2 ರವರುಗಳಿಗೆ ಜಾರಿಯಾಗಿದ್ದು, ಆ.ಸ.ನೌ-3 ರವರಿಗೆ ದೋಷಾರೋಪಣಾ ಪಟ್ಟಿ ಜಾರಿಯಾಗಿರುವುದಿಲ್ಲ, ದಿನಾಂಕ 28/12/2020 ರಂದು ಈ ವಿಚಾರಣಾ ಪ್ರಾಧಿಕಾರದ ಮುಂದೆ ಆ.ಸ.ನೌ-1 ಮತ್ತು 2 ರವರುಗಳು ಹಾಜರಾಗದಿದ್ದ ಕಾರಣ ಸದರಿಯವರುಗಳನ್ನು **ಏಕತರ್ಫಿ ಎಂದು ಪರಿಗಣಿಸಲಾಗಿರುತ್ತದೆ.** ಆ.ಸ.ನೌ-1 ರಿಂದ 3 ರವರುಗಳು ದಿನಾಂಕ 03/02/2021

ರಂದು ಸಹ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ನಂತರ ಆ.ಸ.ನೌ–3 ರವರಿಗೆ ದೋಷಾರೋಪಣಾ ಪಟ್ಟಿಯು ದಿನಾಂಕ 06/03/2021 ರಂದು ಜಾರಿಯಾಗಿದ್ದು, ದಿನಾಂಕ 22.03.2021 ರಂದು ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ.

4) ದಿನಾಂಕ 14.06.2021 ರಂದು ಕರ್ನಾಟಕ ನ್ಯಾಯ ಮಂಡಳಿ, ಕಲಬುರ್ಗಿ ಪೀಠದಿಂದ ಆ.ಸ.ನೌ–3 **ಶ್ರೀ ಮೊಹಮದ್ ಸಾದಿಕ್ ಅಲಿ ಬಕ್ರಿ,** ಕಿರಿಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ, ಯಾದಿಗಿರಿ ಜಿಲ್ಲೆ ರವರು ಸಲ್ಲಿಸಿದ್ದ ಅರ್ಜಿ ಸಂಖ್ಯೆ 20324/2021 ರಲ್ಲಿ ಸರ್ಕಾರಿ ಆದೇಶ ಮತ್ತು ದೋಷಾರೋಪಣಾ ಪಟ್ಟಿಯನ್ನು ಪ್ರಶ್ನಿಸಿದ್ದು ದಿನಾಂಕ 14.06.2021 ರಲ್ಲಿ ಸದರಿ ಸರ್ಕಾರಿ ಆದೇಶ ಮತ್ತು ದೋಷಾರೋಪಣಾ ಪಟ್ಟಿ ಆ.ಸ.ನೌ–3 ರವರಿಗೆ ಸಂಬಂಧಿಸಿದಂತೆ ವಜಾಗೊಂಡಿದ್ದು, ಸದರಿ ಆದೇಶದ ವಿರುದ್ಧ ಲೋಕಾಯುಕ್ತ ಸಂಸ್ಥೆಯು ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರ್ಗಿ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ 200035/2022 ಸಲ್ಲಿಸಿದ್ದು, ಚಾಲ್ತಿಯಲ್ಲಿರುತ್ತದೆ. ಕರ್ನಾಟಕ ಉಚ್ಚ ನ್ಯಾಯಾಲಯದ, ಕಲಬುರ್ಗಿ ಪೀಠದ ಅಂತಿಮ ಅದೇಶದನುಸಾರವಾಗಿ ಆ.ಸ.ನೌ–3 **ಶ್ರೀ ಮೊಹಮದ್ ಸಾದಿಕ್ ಅಲಿ ಬಕ್ರಿ,** ಕಿರಿಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸುರಪುರ, ಯಾದಿಗಿರಿ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆಯು ಅಂತಿಮ ಕ್ರಮಕೈಗೊಳ್ಳಲಾಗುವುದು.

5) ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರುಗಳು ದಿನಾಂಕ 28/12/2020 ರಿಂದ ವಿಚಾರಣೆ ಮುಗಿಯುವವರೆಗೂ ಹಾಜರಾಗದೇ ಯಾವುದೇ ರಕ್ಷಣಾ ಹೇಳಿಕೆಯನ್ನು ಸಹ ಸಲ್ಲಿಸಿರುವುದಿಲ್ಲ ಸದರಿಯವರರುಗಳನ್ನು ಏಕತರ್ಫಿ ಎಂದು ಪರಿಗಣಿಸಲಾಗಿರುತ್ತದೆ ಹಾಗೂ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

6) ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ ಶ್ರೀ ಭೀಮರಾಯ, ಸಮಾಜಸೇವೆ, ಅರಕೇರ ಗ್ರಾಮ, ಲಕ್ಷ್ಮೀಪುರ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ರವರನ್ನು ಪಿ.ಡಬ್ಲ್ಯೂ–1 ಮತ್ತು ಶ್ರೀ ಬಶೀರುದ್ದೀನ್ ಪಟೇಲ್, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಲಬುರಗಿ ರವರನ್ನು ಪಿಡಬ್ಲ್ಯೂ–2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–1 ಮತ್ತು ನಿ.ಪಿ–17 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ವಿಚಾರಣಾ ಪ್ರಾಧಿಕಾರದ ಮುಂದೆ ಆ.ಸ.ನೌ–1

ಮತ್ತು 2 ರವರುಗಳು ಗೈರು ಹಾಜರಾಗಿರುವುದರಿಂದ, ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುವುದಿಲ್ಲ.

7) ಆ.ಸ.ನೌ–1 ಮತ್ತು 2 ರವರುಗಳು ರಕ್ಷಣಾ ಹೇಳಿಕೆಯನ್ನು ಸಲ್ಲಿಸದೆ ಏಕತರ್ಫಿಯಾಗಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

8) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

9) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು 2 ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

10) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1) ಸಕಾರಾತ್ಮಕವಾಗಿ.**

**ಅಂಶ–2)** ಅಂತಿಮ ಆದೇಶದಂತೆ.

## <u>ಕಾರಣಗಳು</u>

12) **ಅಂಶ–1:** ಈ ಪ್ರಕರಣದಲ್ಲಿ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪವನ್ನು ರುಜುವಾತುಪಡಿಸಲು, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ ಭೀಮರಾಯ**, ಸಮಾಜಸೇವೆ, ಅರಕೇರ ಗ್ರಾಮ, ಲಕ್ಷ್ಮೀಪುರ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ರವರನ್ನು ಪಿ.ಡಬ್ಲ್ಯೂ–1 ಮತ್ತು ಶ್ರೀ ಬಶೀರುದ್ದೀನ್ ಪಟೇಲ್, ಪೊಲೀಸ್ ನಿರೀಕ್ಷಕರು,

ಕರ್ನಾಟಕ ಲೋಕಾಯುಕ್ತ, ಕಲಬುರಗಿ ರವರನ್ನು ಪಿಡಬ್ಲ್ಯೂ-2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ-1 ಮತ್ತು ನಿ.ಪಿ-17 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

13) ದೂರುದಾರ **ಪಿಡಬ್ಲ್ಯೂ-1 ಶ್ರೀ ಭೀಮರಾಯತಮ್ಮ ಮುಖ್ಯ ವಿಚಾರಣೆಯಲ್ಲಿ,** ತಾನು ಲಕ್ಷ್ಮೀಪುರ ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಕ್ಕಲುತನದ ಜೊತೆಗೆ ಸಮಾಜ ಸೇವೆಯನ್ನು ಮಾಡಿಕೊಂಡಿದ್ದು ಆ.ಸ.ನೌ-1 ರಿಂದ 3 ರವರು ತನಗೆ ಪರಿಚಯವಿರುವುದಾಗಿ, 2015-16 ರ ಸಾಲಿನಲ್ಲಿ ಆಲದಾಳ್ ಗ್ರಾಮ ಪಂಚಾಯತಿಯಲ್ಲಿ ತಾಲ್ಲೂಕು ಪಂಚಾಯತಿಯ ಅನಿರ್ಬಂಧಿತ ಅನುದಾನಿತ ಯೋಜನೆಯಲ್ಲಿ ಕೈಗೊಳ್ಳಲಾದ(1) **ಕಾಮಗಾರಿ-1** ಆಲದಾಳ್ ಗ್ರಾಮದ ಎಸ್‌ಸಿ ವಾರ್ಡ್‌ನ ಪವಲ್ ಪ್ಲಾಟ್‌ನಿಂದ ಅಗಸಿಯವರೆಗೆ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಗೆ ರೂ. 3 ಲಕ್ಷ ಬಿಡುಗಡೆ ಆಗಿತ್ತು. ಡಿಜಿಓ ರವರು ಕಾಮಗಾರಿಯನ್ನು ಕೈಗೊಳ್ಳದೆ ಬೇರೆ ಗ್ರಾಮದ ಕಾಮಗಾರಿಯ ಛಾಯಚಿತ್ರವನ್ನು ತೋರಿಸಿ, ಬೋಗಸ್ ಬಿಲ್ ಮಾಡಿ ರೂ. 2,96,486/- ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಡಿಜಿಓ-1 ಮತ್ತು 2 ರವರುಗಳು ಹಾಗೂ ವೈದ್ಯನಾಥ್, ಪಂಚಾಯತಿ ಅಧ್ಯಕ್ಷರು, ಅವರೇ ತುಂಡು ಗುತ್ತಿಗೆ ಪಡೆದುಕೊಂಡು ಹಣ ದುರುಪಯೋಗ ಮಾಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

14) ದೂರುದಾರ ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, **ಕಾಮಗಾರಿ-2** 2014-15ನೇ ಸಾಲಿನ ಬಿ.ಆರ್.ಜಿ.ಎಫ್., ಯೋಜನೆಯಡಿಯಲ್ಲಿ ಕೈಗೊಳ್ಳಲಾದ ಕಾಮಗಾರಿಯನ್ನು ಆಲದಾಳ್ ಗ್ರಾಮದ ಸರ್ಕಾರಿ ಶಾಲೆಯ ಕಾಂಪೌಂಡ್ ನಿರ್ಮಾಣ ಕಾಮಗಾರಿಯ ಅಂದಾಜು ವೆಚ್ಚ 3.50 ಲಕ್ಷ ಇದ್ದು, ಈ ಕಾಮಗಾರಿಯ ಬದಲಿಗೆ ಮುಷ್ಟಿದೊಡ್ಡಿ ಗ್ರಾಮದ ಕಿರಿಯ ಪ್ರಾಥಮಿಕ ಶಾಲೆಯ ಕಾಮಗಾರಿ ತೋರಿಸಿ ದಾಖಲೆಗಳನ್ನು ಸೃಷ್ಟಿ ಮಾಡಿ ಗುತ್ತಿಗೆದಾರರಿಗೆ ಕಾಮಗಾರಿ ನಿರ್ವಹಣಾ ವೆಚ್ಚ 3,40,471/- ಗಳನ್ನು ಪಾವತಿಸಿ ಹಣ ದುರುಪಯೋಗ ಮಾಡಿರುತ್ತಾರೆ. ಡಿಜಿಓ ರವರು ಮತ್ತು ವೈದ್ಯನಾಥ್ ರವರು ಶಾಮೀಲಾಗಿರುತ್ತಾರೆ.

15) ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, **ಕಾಮಗಾರಿ-3** 2014-15ನೇ ಸಾಲಿನಲ್ಲಿ ಬಿಆರ್‌ಜಿಎಫ್ ಹಾವಿನಾಳ ಗ್ರಾಮದ ನಿಂಗಪ್ಪ ಹರಿಜನ್ ಮನೆಯಿಂದ ವಿನೋದ ಸಾಳಂಕಿ ರವರ ಮನೆಯವರೆಗೆ ಸಿಸಿ ರಸ್ತೆ ಕಾಮಗಾರಿ ಅಂದಾಜು ವೆಚ್ಚ 3 ಲಕ್ಷ ಮಂಜೂರಾಗಿದ್ದು, **ಸದರಿ ಕಾಮಗಾರಿ**

ಕೈಗೊಳ್ಳದೇ ಆಲ್ದಾಳ್ ಗ್ರಾಮದ ತಿಪ್ಪಣ್ಣ ಬಿನ್ ಭೀಮಣ್ಣ ಅಂಬ್ಲಿ ರವರ ಮನೆಯ ಮುಂದೆ ಈ ಹಿಂದೆ ಇದ್ದ ಸಿಸಿ ರಸ್ತೆಯ ಕಾಮಗಾರಿ ಫೋಟೋ ಲಗತ್ತಿಸಿ, ಕಾಮಗಾರಿ ನಿರ್ವಹಿಸಿದೆ ಎಂದು ಬೋಗಸ್ ಬಿಲ್ ಸೃಷ್ಟಿಸಿ ಕಾಮಗಾರಿ ವೆಚ್ಚ ರೂ.2,97,517/- ಗುತ್ತಿಗೆ ದಾರರಿಗೆ ಪಾವತಿ ಮಾಡಿ ಡಿಜಿಓರವರು ಹಣ ದುರುಪಯೋಗ ಮಾಡಿರುತ್ತಾರೆ. ಆ ಬಗ್ಗೆ ತಾನು ಆರೋಪಿಸಿ ಮಾನ್ಯ ಲೋಕಾಯುಕ್ತಕ್ಕೆ ದೂರು ನೀಡಿದ್ದು, ಸದರಿ ದೂರನ್ನು ಈಗ ನೋಡಿದ್ದು, ಅದನ್ನು ***ನಿಪಿ-1,*** ಫಾರಂ ನಂ.1 ಮತ್ತು 2 ಕ್ರಮವಾಗಿ ***ನಿಪಿ-2*** ಮತ್ತು ***ನಿಪಿ-3,*** ಸದರಿ 3 ಕಾಮಗಾರಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನನ್ನ ದೂರಿನೊಂದಿಗೆ ಸಲ್ಲಿಸಿದ್ದು ಅವುಗಳು ಪುಟ ಸಂ.7 ರಿಂದ 53ರವರೆಗೆ ಇದ್ದು, ಅವುಗಳನ್ನು ಒಟ್ಟಾರೆಯಾಗಿ ***ನಿಪಿ-4*** ಎಂದು, ತನಿಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ತನಿಖೆ ಮಾಡುವ ಕಾಲಕ್ಕೆ ನಾನು ಹಾಜರಿದ್ದು, 03 ಕಾಮಗಾರಿಗೆ ಸಂಬಂಧಪಟ್ಟಂತೆ ಫೋಟೋ ತೆಗೆದಿರುತ್ತಾರೆ ಮತ್ತು 03 ಕಾಮಗಾರಿಗೆ ಸಂಬಂಧಪಟ್ಟಂತೆ ಕಾಮಗಾರಿ ಮಾಡಬೇಕಾದ ಸ್ಥಳದ ಮತ್ತು ಮಾಡಿದೇ ಎಂದು ತೋರಿಸಿದ ಸ್ಥಳದ ಪಂಚನಾಮೆಯನ್ನು ಕೈಗೊಂಡಿರುತ್ತಾರೆ.

16) ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 29.12.2017 ರಂದು ಆಲ್ದಾಲ್ ಮತ್ತು ಮುಷ್ಟಿದೊಡ್ಡಿ ಗ್ರಾಮದಲ್ಲಿ ಕಾಮಗಾರಿ ಮಾಡಬೇಕಾದ ಸ್ಥಳದ ಮತ್ತು ಮಾಡಿದೇ ಎಂದು ತೋರಿಸಿದ ಸ್ಥಳದ ಪಂಚನಾಮೆಯನ್ನು ಕೈಗೊಂಡಿದ್ದು ಅದು **ನಿ.ಪಿ-5** ಎಮದು ಗುರುತಿಸಿದ್ದು, ಅದರ ಜೊತೆ ತೆಗೆದ 03 ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು **ನಿ.ಪಿ-6, ನಿ.ಪಿ-7** ಮತ್ತು **ನಿ.ಪಿ-8** ಎಂದು ಗುರುತಿಸಲಾಯಿತು. ಸದರಿ 03 ಫೋಟೋಗಳಲ್ಲಿ ತಾನು ಸಹ ಕಂಡುಬಂದಿದ್ದು, ಅದೇ ದಿನ ಆಲ್ದಾಳ್ ಗ್ರಾಮದ ಕುಡಿಯುವ ನೀರಿನ ಕಾಮಗಾರಿಗೆ ಸಂಬಂಧಪಟ್ಟಂತೆ ಕಾಮಗಾರಿ ಮಾಡಬೇಕಾದ ಸ್ಥಳದ ಮತ್ತು ಮಾಡಿದೇ ಎಂದು ತೋರಿಸಿದ ಸ್ಥಳದ ಪಂಚನಾಮೆಯನ್ನು ಕೈಗೊಂಡಿದ್ದು ಅದನ್ನು **ನಿ.ಪಿ-9** ಎಂದು ಸದರಿ ಪಂಚನಾಮೆ ಕಾಲಕ್ಕೆ ತೆಗೆದ 03 ಫೋಟೋಗಳನ್ನು ಕ್ರಮವಾಗಿ **ನಿ.ಪಿ-10, ನಿ.ಪಿ-11** ಮತ್ತು **ನಿ.ಪಿ-12** ಎಂದು ಗುರುತಿಸಲಾಯಿತು.

17) ಪಿಡಬ್ಲ್ಯೂ-1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಅದೇ ದಿನ ಆಲ್ದಾಳ್ ಮತ್ತು ಹಾವಿನಾಳ್ ಗ್ರಾಮದಲ್ಲಿ ಸಿಸಿ ರಸ್ತೆಗೆ ಸಂಬಂಧಿಸಿದಂತೆ ಕಾಮಗಾರಿ ಮಾಡಬೇಕಾದ ಸ್ಥಳದ ಮತ್ತು ಮಾಡಿದೇ ಎಂದು ತೋರಿಸಿದ ಸ್ಥಳದ ಪಂಚನಾಮೆಯನ್ನು ಕೈಗೊಂಡಿದ್ದು ಅದು ***ನಿಪಿ-13*** ಎಂದು, ಸದರಿ ಕಾಲಕ್ಕೆ ತೆಗೆದ 04 ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ***ನಿಪಿ-14ರಿಂದ ನಿಪಿ-17*** ಎಂದು

ಗುರುತಿಸಲಾಯಿತು. ಆ ಕಾಲಕ್ಕೆ ಶಿಕ್ಷಣ ಇಲಾಖೆಯಿಂದ ಪಂಚರಾಗಿ ಲಕ್ಷ್ಮಣ್ ಮತ್ತು ಗಣಪತ್ ರವರನ್ನು ತನಿಖಾಧಿಕಾರಿಯವರು ಕರೆಸಿಕೊಂಡಿರುತ್ತಾರೆ ಮತ್ತು ಅವರು ಪಂಚನಾಮೆಗಳಿಗೆ ಸಹಿ ಮಾಡಿರುತ್ತಾರೆ.

18) ಪಿಡಬ್ಲ್ಯೂ-2 ಶ್ರೀ ಬಶೀರುದ್ದೀನ್ ಪಟೇಲ್, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಯಾದಗಿರಿ (ತನಿಖಾಧಿಕಾರಿ) ರವರ ಮುಖ್ಯ ವಿಚಾರಣೆಯಲ್ಲಿ, ತಾನು ಅಕ್ಟೋಬರ್ 2017 ರಿಂದ ಏಪ್ರೀಲ್ 2018 ರವರೆಗೆ ಲೋಕಾಯುಕ್ತ ಪೊಲೀಸ್ ನಿರೀಕ್ಷಕನಾಗಿ ಯಾದಗಿರಿ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸಿದ್ದಾಗಿ, ಸದರಿ ಪ್ರಕರಣದ ತನಿಖೆಗೆ ದಿನಾಂಕ: 20-12-2017 ರಂದು ಪಡೆದುಕೊಂಡಿದ್ದು, ತಾನು ಅಲ್ದಾಳ್ ಗ್ರಾಮ ಪಂಚಾಯತಿಗೆ ಭೇಟಿ ಕೊಟ್ಟು, ಯಾದಗಿರಿ, ಸುರಪುರ ತಾಲ್ಲೂಕು ಅಲದಾಳ ಗ್ರಾಮ ಪಂಚಾಯತ್ ಹಾಗೂ ಹಾವಿನಹಾಳ ಗ್ರಾಮಗಳಲ್ಲಿ ನಡೆದ ಕಾಮಗಾರಿಗಳು ಬೋಗಸ್ ಇದ್ದು, ತಪ್ಪಿತಸ್ಥರಾದ ಗುತ್ತಿಗೆದಾರ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಕಿರಿಯ ಅಭಿಯಂತರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ದೂರಿದ್ದು, ಸದರಿ ಕಾಮಗಾರಿಗಳ ಗುತ್ತಿಗೆದಾರರು ಹಾಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈಜಿನಾಥ್ ಬಿನ್ ಮಾನಪ್ಪ ಹುದ್ದಾರ್ ರವರಾತಿದ್ದು ಇವರ ಮೇಲೆ ದೂರಿತ್ತು.

19) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಕಾಮಗಾರಿ-1 ಅಲ್ದಾಳ್ ಗ್ರಾಮದ ಎಸ್.ಸಿ., ಓಣಿಯಿಂದ ಅಗಸಿಯವರೆಗೆ ಕೈಗೊಂಡ ಪೈಪ್‌ಲೈನ್ ಕಾಮಗಾರಿಯನ್ನು 2012ನೇ ಸಾಲಿನಲ್ಲಿ ಪವರ್ ಪ್ಲಾಂಟ್ ನವರು ಕೈಗೊಂಡಿದ್ದು ಇರುತ್ತದೆ. ಆದರೆ, 2015-16ನೇ ಸಾಲಿನ ತಾಲ್ಲೂಕು ಪಂಚಾಯತ್‌ನ ಅನಿರ್ಬಂಧಿತ ಅನುದಾನಿತ ಯೋಜನೆಯಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಕೈಗೊಳ್ಳದೆ ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡುಬರುತ್ತದೆ. ಅಧಿಕಾರಿಗಳಾದ ಆ.ಸ.ನೌಕರ-1 ಶ್ರೀ ಹನುಮಂತ, ಆ.ಸ.ನೌ-2 ಶ್ರೀ ಹನುಮಂತಪ್ಪ ಅಂಬಲಿ, ಪಂಚಾಯತ್ ಇಂಜಿನಿಯರ್, ಆ.ಸ.ನೌಕರರಾದ-3 ಶ್ರೀ ಮಹಮ್ಮದ್ ಸಾದಿಕ್ ಆಲಿ ಬಕರೆ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈಜಿನಾಥ ಮಾನಪ್ಪ ಹುದ್ದಾರ್ ಇವರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರೂ ಸಹ ಗುತ್ತಿಗೆದಾರರಾಗಿ ಕಾಮಗಾರಿಗಳನ್ನು ಪಡೆದು, ಕಾಮಗಾರಿಗಳನ್ನು ಮಾಡದೇ ಒಟ್ಟು ರೂ.2,96,486/-ಗಳ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ.

20) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಕಾಮಗಾರಿ-2, 2014-15ನೇ ಸಾಲಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಬಿ.ಆರ್.ಜಿ.ಎಫ್., ಯೋಜನೆಯಲ್ಲಿ ಸುರಪೂರ ತಾಲ್ಲೂಕಿನ ಅಲ್ದಾಳ್ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಕೌಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ಮಾಡದೇ ಮುಷ್ಟೂರು ದೊಡ್ಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಕೌಂಪೌಂಟ್ ಗೋಡೆಯ ಕಾಮಗಾರಿಯ ಭಾವಚಿತ್ರವನ್ನು ಈ ಕಾಮಗಾರಿಗೆ ಅಂಟಿಸಿ, ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ. ಸದರಿ ಕಾಮಗಾರಿಗೆ ಸಂಬಂಧಪಟ್ಟ ಅಧಿಕಾರಿಗಳಾದ ಆ.ಸ.ನೌ-2 ಶ್ರೀ ಹನಮಂತಪ್ಪ ಅಂಬಲಿ ಆ.ಸ.ನೌ-3 ಶ್ರೀ ಸಾದಿಕ್ ಆಲಿ, ಸಹಾಯಕ ಅಭಿಯಂತರರು ಹಾಗೂ ಅಲ್ದಾಳ್ ಗ್ರಾಮ ಪಂಚಾಯತ್ ಆಧ್ಯಕ್ಷರಾದ ಶ್ರೀ ವೈಜಿನಾಥ್ ಮಾನಪ್ಪ ಹುದ್ದಾರ್‌ರವರು ಪಂಚಾಯತ್ ಅಧ್ಯಕ್ಷರಾಗಿದ್ದರೂ ಗುತ್ತಿಗೆದಾರರಾಗಿ ಕೆಲಸ ಮಾಡಲು ಬರದಿದ್ದರೂ ಸಹ ಗುತ್ತಿಗೆದಾರರೆಂದು ನಮೂದು ಮಾಡಿ ರೂ.3,40,471/- ಹಣ ದುರುಪಯೋಗ ಮಾಡಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ.

21) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಕಾಮಗಾರಿ-3, 2014-15ನೇ ಸಾಲಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪವಿಭಾಗದಲ್ಲಿ ಡಿ.ಆರ್.ಜಿ.ಎಫ್., ಯೋಜನೆಯಡಿಯಲ್ಲಿ ಸುರಪೂರ ತಾಲ್ಲೂಕಿನ ಹಾವಿನಾಳ ಗ್ರಾಮದಲ್ಲಿ ಶ್ರೀ ನಿಂಗಪ್ಪ ಹರಿಜನ್ ಇವರ ಮನೆಯಿಂದ ಶ್ರೀ ವಿನೋದ್ ಸಾಳಂಕೆ ಇವರ ಮನೆಯವರೆಗೆ ಸಿ.ಸಿ., ರಸ್ತೆ ಕಾಮಗಾರಿಯನ್ನು ಮಾಡದೇ ಅಲ್ದಾಳ್ ಗ್ರಾಮದ ಶ್ರೀ ತಿಪ್ಪಣ ಬಿನ್ ಭೀಮಣ್ಣ ಹಳದಿ ಇವರ ಮನೆಯ ಮುಂದೆ ,ಈ ಹಿಂದೆ ನಿರ್ಮಿಸಿದ ಸಿ.ಸಿ., ರಸ್ತೆಯ ಕಾಮಗಾರಿಯ ಫೋಟೋಗಳನ್ನು ಈ ಬಿಲ್ಲಿಗೆ ಲಗತ್ತಿಸಿ ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಆ.ಸ.ನಾಕರರಾದ ಶ್ರೀ ಹನುಮಂತಪ್ಪ ಅಂಬಲಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಶ್ರೀ ಸಾದಿಕ್ ಅಲಿ ಬಕ್ರ, ಸಹಾಯಕ ಅಭಿಯಂತರು ಪಂಚಾಯತ್ ರಾಜ್ ಇಂಜಿನಿಯರಿಂಗ ಉಪವಿಭಾಗ ಸುರಪುರ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈಜಿನಾಥ್ ಮಾನಪ್ಪ ಹುದ್ದಾರ್ ಇವರು ಪಂಚಾಯತ್ ಅಧ್ಯಕ್ಷರಾಗಿದ್ದರೂ ಸಹ ಗುತ್ತಿಗೆದಾರನಾಗಿ ಕಾಮಗಾರಿ ಪಡೆದಂತೆ ದಾಖಲಾತಿ ಸೃಷ್ಟಿ ಮಾಡಿ ರೂ. 2,92,517/- ಗಳ ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆ.ಸ.ನೌಕರರು-1 ರಿಂದ 2ರವರು ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ವೈಜ್ಯನಾಥ್ ಮಾನಪ್ಪ

ಹುದ್ದಾರ್‌ರವರು ಕೂಡಿ ಮೇಲ್ಕಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೋಗಸ್ ಬಿಲ್ಲುಗಳನ್ನು ಸೃಷ್ಟಿ ಮಾಡಿ, ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮೇಲ್ಕಂಡ ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದಿನಾಂಕ: 14–02–2018ರಂದು ಮಾನ್ಯ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ರವರಿಗೆ ವಿವರವಾದ ವರದಿಯನ್ನು ಸಲ್ಲಿಸಿದ್ದು ಅದು ಈಗ **ನಿ.ಪಿ–18** ಎಂದು ಗುರುತಿಸಲಾಯಿತು.

22) ಪಿಡಬ್ಲ್ಯೂ–2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತನಿಖಾ ಕಾಲದಲ್ಲಿ ಮಷ್ನೂರು ಗ್ರಾಮಕ್ಕೆ ಭೇಟಿ ಕೊಟ್ಟು ಸ್ಕೂಲ್ ಕೌಂಪೌಂಡ್‌ಗೆ ಸಂಬಂಧಪಟ್ಟಂತೆ ಮಹಜರ್ ಮಾಡಿರುತ್ತೇನೆ. ಸದರಿ ಸ್ಥಳ ಮಹಜರ್ ಅನ್ನು ಈಗಾಗಲೆ ನಿ.ಪಿ–5 ಎಂದು ಹಾಗೂ ಆ ಕಾಲಕ್ಕೆ ಹಾಜರಿದ್ದ ದೂರುದಾರರು ಮತ್ತು ಪಂಚರ ಸಮಕ್ಷಮ ಫೋಟೋಗಳನ್ನು ತೆಗೆದಿದ್ದು, ಸದರಿ ಫೋಟೋಗಳನ್ನು ಈಗಾಗಲೇ ಈಗಾಗಲೇ ನಿ.ಪಿ–6 ರಿಂದ ನಿ.ಪಿ–8 ಎಂದು ಗುರುತಿಸಲಾಗಿದೆ. ಅಲ್ದಾಳ್ ಗ್ರಾಮದ ಕಾಮಗಾರಿ ಪವರ್ ಪ್ಲಾಂಟ್‌ಗೆ ಸಂಬಂಧಪಟ್ಟಂತೆ ಕಾಮಗಾರಿ ಪರಿಶೀಲನೆ ಮಾಡಿ, ದೂರುದಾರರ ಮತ್ತು ಪಂಚರ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತೇನೆ. ಅದನ್ನು ಈಗಾಗಲೆ ನಿ.ಪಿ–9 ಎಂದು ಗುರುತಿಸಲಾಗಿದೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಪೋಟೋ ತೆಗೆದಿದ್ದು, ಅವುಗಳನ್ನು ಈಗಾಗಲೆ ಕ್ರಮವಾಗಿ ನಿ.ಪಿ–10 ರಿಂದ ನಿ.ಪಿ–12 ಎಂದು ಗುರುತಿಸಲಾಗಿದೆ. ಅದೇ ದಿವಸ ಹಾವಿನಾಳ್ ಗ್ರಾಮದ ಸಿ.ಸಿ., ರೋಡ್‌ಗೆ ಸಂಬಂಧಪಟ್ಟಂತೆ ದೂರುದಾರರ ಮತ್ತು ಪಂಚರ ಸಮಕ್ಷಮ ಮಹಜರ್ ಮಾಡಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿ.ಪಿ–13 ಎಂದು ಸಾಕ್ಷಿದಾರರ ಸಹಿಯನ್ನು ನಿ.ಪಿ–13ಎ ಎಂದು ಹಾಗೂ ಫೋಟೋಗಳನ್ನು ನಿ.ಪಿ–14 ರಿಂದ 17 ಎಂದು ಈಗಾಗಲೇ ಗುರುತಿಸಲಾಗಿದೆ ಎಂದು ನುಡಿದಿರುತ್ತಾರೆ.

23) ಪಾಟೀ ಸವಾಲಿನ ಸಂಬಂಧ ಆಪಾದಿತ ಸರ್ಕಾರಿ ನೌಕರರು ಗೈರು ಹಾಜರಾಗಿದ್ದು ಏಕಪಕ್ಷೀಯವೆಂದು ಪರಿಗಣಿಸಿ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

24) ಪಿಡಬ್ಲ್ಯೂ–1 ಮತ್ತು 2 ರವರುಗಳ ಸಾಕ್ಷ್ಯ ನಿ.ಪಿ–1 ರಿಂದ 18 ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ, ಕಾಮಗಾರಿ–1 ಕ್ಕೆ ಸಂಬಂಧಿಸಿದಂತೆ, ಅಲ್ದಾಳ್ ಗ್ರಾಮದ ಎಸ್.ಸಿ. ಓಣಿಯಿಂದ ಅಗಸಿಯವರೆಗೆ ಕೈಗೊಂಡ ಪೈಪ್‌ಲೈನ್ ಕಾಮಗಾರಿಯನ್ನು 2012 ನೇ

ಸಾಲಿನಲ್ಲಿ ಪವರ್ ಪ್ಲಾಂಟ್ ನವರು ಕೈಗೊಂಡಿದ್ದು, ಆದರೆ, 2015–16ನೇ ಸಾಲಿನ ತಾಲ್ಲೂಕು ಪಂಚಾಯತ್‌ನ ಅನಿರ್ಬಂಧಿತ ಅನುದಾನಿತ ಯೋಜನೆಯಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿ ಕೈಗೊಳ್ಳದೆ ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದು, **ಆಪಾದಿತ ಸರ್ಕಾರಿ ನೌಕರ–1 ಶ್ರೀ ಹಣಮಂತ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ ಜಿಲ್ಲೆ ಮತ್ತು ಆ.ಸ.ನೌ–2 ಶ್ರೀ ಹನುಮಂತಪ್ಪ ಅಂಬಲಿ, ಪಂಚಾಯತ್ ಇಂಜಿನಿಯರ್ ರವರುಗಳು ಕಾಮಗಾರಿಗಳನ್ನು ಮಾಡದೆ ಒಟ್ಟು ರೂ. 2,96,486/–ಗಳಹಣ ದುರುಪಯೋಗ ಮಾಡಿಕೊಂಡಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.**

25) ಇನ್ನು ಕಾಮಗಾರಿ–2, 2014–15 ನೇ ಸಾಲಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಲ್ಲಿ ಬಿ.ಆರ್.ಜಿ.ಎಫ್ ಯೋಜನೆಯಲ್ಲಿ ಸುರಪೂರ ತಾಲ್ಲೂಕಿನ ಆಲ್ದಾಳ್ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಕಾಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ಮಾಡದೇ ಮುಷ್ಟೂರು ದೊಡ್ಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಕಾಂಪೌಂಡ್ ಗೊಡೆಯ ಕಾಮಗಾರಿಯ ಭಾವಚಿತ್ರವನ್ನು ಆ ಕಾಮಗಾರಿಗೆ ಅಂಟಿಸಿ, ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿದ್ದು, **ಸದರಿ ಕಾಮಗಾರಿಗೆ ಸಂಬಂಧಪಟ್ಟ ಅಧಿಕಾರಿಯಾದ ಆಪಾದಿತ ಸರ್ಕಾರಿ ನೌಕರ–2 ಶ್ರೀ ಹನುಮಂತಪ್ಪ ಅಂಬಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಸುರುಪುರ, ಯಾದಗಿರಿ ಜಿಲ್ಲೆ ರವರು ರೂ. 3,40,471/– ಸರ್ಕಾರಿ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.**

**26)** ಇನ್ನು ಕಾಮಗಾರಿ–3, 2014–15ನೇ ಸಾಲಿನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಡಿ.ಆರ್.ಜಿ.ಎಫ್ ಯೋಜನೆಯಡಿಯಲ್ಲಿ ಸುರಪೂರ ತಾಲ್ಲೂಕಿನ ಹಾವಿನಾಳ ಗ್ರಾಮದಲ್ಲಿ ಶ್ರೀ ನಿಂಗಪ್ಪ ಹರಿಜನ್ ಇವರ ಮನೆಯಿಂದ ಶ್ರೀ ವಿನೋದ್ ಸಾಳಂಕೆ ಇವರ ಮನೆಯವರೆಗೆ ಸಿ.ಸಿ. ರಸ್ತೆ ಕಾಮಗಾರಿಯನ್ನು ಮಾಡದೇ ಅಲ್ದಾಳ್ ಗ್ರಾಮದ ಶ್ರೀ ತಿಪ್ಪಣ್ಣ ಬಿನ್ ಭೀಮಣ್ಣ ಹಳದಿ ಇವರ ಮನೆಯ ಮುಂದೆ, ಈ ಹಿಂದೆ ನಿರ್ಮಿಸಿದ ಸಿ.ಸಿ. ರಸ್ತೆಯ ಕಾಮಗಾರಿಯ ಫೋಟೋಗಳನ್ನು ಈ ಬಿಲ್ಲಿಗೆ ಲಗತ್ತಿಸಿ ಬೋಗಸ್ ಬಿಲ್ಲುಗಳನ್ನು ತಯಾರಿಸಿ, ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿದ್ದು, **ಆಪಾದಿತ ಸರ್ಕಾರಿ ನೌಕರ–2 ಶ್ರೀ ಹನುಮಂತಪ್ಪ ಅಂಬಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ**

**ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಸುರಪುರ, ಯಾದಗಿರಿ ಜಿಲ್ಲೆ ರವರು ರೂ. 2,92,517/- ಹಣ ದುರುಪಯೋಗ ಮಾಡಿಕೊಂಡಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.**

27) ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ಈ ಪ್ರಕರಣದಲ್ಲಿ ಗೈರು ಹಾಜರಾಗಿರುತ್ತಾರೆ. ಆ.ಸ.ನೌ-1 ಮತ್ತು 2 ರವರುಗಳು ಗೈರು ಹಾಜರಾಗಿರುವುದರಿಂದ ಏಕತರ್ಪಿ ಎಂದು ನಿರ್ಧರಿಸಲಾಗಿರುತ್ತದೆ ಹಾಗೂ ಪಿಡಬ್ಲ್ಯೂ-1 ಮತ್ತು 2 ರವರುಗಳನ್ನು ಆ.ಸ.ನೌ-1 ಮತ್ತು 2 ರವರುಗಳು ಪಾಟೀ ಸವಾಲು ಮಾಡಿಕೊಂಡಿರುವುದಿಲ್ಲ.

28) ಈ ಎಲ್ಲಾ ಕಾರಣಗಳಿಂದ ಆ.ಸ.ನೌ-1 ಮತ್ತು 2 ರವರುಗಳು ಸಾರ್ವಜನಿಕ ನೌಕರರಾಗಿದ್ದು, ಕಾನೂನು ನಿಯಮಗಳನ್ನು ಪರಿಪಾಲಿಸದೆ ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದನ್ನು ಶಿಸ್ತು ಪ್ರಾಧಿಕಾರವು, ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

29) 1ನೇ ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ **ಒಟ್ಟು ರೂ. 2,96,486/-ಗಳ** ಹಣ ನಷ್ಟವಾಗಿದ್ದು, ಆ.ಸ.ನೌಕರ-1 ಮತ್ತು ಆ.ಸ.ನೌಕರ-2ರವರುಗಳು ಸದರಿ ನಷ್ಟಕ್ಕೆ ಕಾರಣರಾಗಿರುತ್ತಾರೆ. ಆದ್ದರಿಂದ, ಸದರಿಯವರುಗಳಿಂದ ತಲಾ ರೂ.98,829/-ಗಳನ್ನು ವಸೂಲಿ ಮಾಡಬಹುದಾಗಿದೆ. 2ನೇ ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ **ಒಟ್ಟು ರೂ.3,40,471/-ಗಳ** ಹಣ ನಷ್ಟವಾಗಿದ್ದು, ಸದರಿ ನಷ್ಟಕ್ಕೆ ಆ.ಸ.ನೌಕರ-2ರವರು ಕಾರಣರಾಗಿರುತ್ತಾರೆ. ಆದ್ದರಿಂದ, ಆ.ಸ.ನೌಕರ-2 ರವರಿಂದ ರೂ.1,70,236/-ಗಳನ್ನು ವಸೂಲಿ ಮಾಡಬಹುದಾಗಿದೆ. 3ನೇ ಕಾಮಗಾರಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ **ಒಟ್ಟು ರೂ. 2,92,517/-ಗಳ** ಹಣ ನಷ್ಟವಾಗಿದ್ದು, ಸದರಿ ನಷ್ಟಕ್ಕೆ ಆ.ಸ.ನೌಕರ-2ರವರು ಕಾರಣರಾಗಿದ್ದು, ಆ.ಸ.ನೌಕರ-2 ರವರಿಂದ ರೂ.1,46,259/-ಗಳನ್ನು ವಸೂಲಿ ಮಾಡಬಹುದಾಗಿದೆ. **ಒಟ್ಟಾರೆ ಆ.ಸ.ನೌಕರ-1ರವರಿಂದ ರೂ.98,829/- ಮತ್ತು ಆ.ಸ.ನೌಕರ-2ರವರಿಂದ ರೂ.4,15,324/-ರೂಪಾಯಿಗಳನ್ನು ವಸೂಲಿ ಮಾಡಬಹುದಾಗಿದೆ.**

30) ಆ.ಸ.ನೌ-1 ಮತ್ತು 2 ರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i)

ರಿಂದ (iii) ರಡಿಯಲ್ಲಿ ಆ.ಸ.ನೌ–1 ಮತ್ತು 2 ರವರುಗಳು ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ–1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು **ಆಪಾದಿತ ಸರ್ಕಾರಿ ನೌಕರ–1 ಶ್ರೀ ಹಣಮಂತ, ಕಿರಿಯ ಇಂಜಿನಿಯರ್,** ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ ಜಿಲ್ಲೆ (ಏಕತರ್ಫಿ) ಮತ್ತು **ಆಪಾದಿತ ಸರ್ಕಾರಿ ನೌಕರ–2 ಶ್ರೀ ಹನುಮಂತಪ್ಪ ಅಂಬಳಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್,** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಸುರಪುರ, ಯಾದಗಿರಿ ಜಿಲ್ಲೆ (ಏಕತರ್ಫಿ) ರವರುಗಳ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತುಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**10ನೇ ಫೆಬ್ರವರಿ 2022**

10/2/22

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Bhimaraya (complainant) (original) | |
| PW-2 : Sri. Bhasheeruddin Patel (I.O) (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | Complaint of the complainant dated: 02-05-2017. (Original) |
| Ex.P.2 : | Form No. I (Complaint) dated: 04-05-2017 (Original) |
| Ex.P.3 : | Form No. II (Affidavit) dated: 04-05-2017. (Original) |
| Ex.P.4 : | Along with complaint Enclosures enclosed to the complaint. (Xerox) |
| Ex.P.5 : | Entrustment Mahazar dated 29/12/2017 (Original) |
| Ex.P.6 to 8 : | 3 photos in respect of works (Original) |
| Ex.P.9 : | Spot Mahazar dated 29/12/2017 (Original) |
| Ex.P.10 to 12 : | 3 photos (Original) |

| | |
|---|---|
| Ex.P.13 | Spot Mahazar dated 29/12/2017<br>(Original) |
| Ex.P-14 | 4 photos (Original) |
| Ex.P-15 | Investigation Report dated 14/02/2018 (Original) |

**10th February 2022.**

10/2/22

Additional Registrar (Enquiries)-10
Karnataka Lokayukta,
Bengaluru.

## KARNATAKA LOKAYUKTA

No.UPLOK-1/DE.203/2020/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 16.02.2022.

### RECOMMENDATION

Sub:- Departmental inquiry against (1) Sri Hanumantha, Junior Engineer, Panchayath Raj Engineering Sub-division, Yadgiri, (2) Sri Hanumanthappa Ambali, Assistant Executive Engineer, Rural Water Drinking and Sanitization Sub-division, Surpur, (3)Sri Mohammed Sadiq Ali Bakri, Junior Engineer, Panchayath Raj Engineering Sub-division, Surapur - reg.

Ref:- 1) Government Order No.RDP 62 ENQ 2020 dt.06.11.2020.

2) Nomination order No. UPLOK-1/DE.203/2020 dated 17.11.2020 of Upalokayukta, State of Karnataka.

3) Inquiry report dated 10.02.2022 of Additional Registrar of Enquiries-10, Karnataka Lokayukta, Bengaluru.

~~~~~

The Government by its order dated 06.11.2020 initiated the disciplinary proceedings against (1) Sri Hanumantha, Junior Engineer, Panchayath Raj Engineering Sub-division, Yadgiri, (2) Sri Hanumanthappa Ambali, Assistant Executive Engineer, Rural Water Drinking and Sanitization Sub-division, Surpur,
~~~~~

(3)Sri Mohammed Sadiq Ali Bakri, Junior Engineer, Panchayath Raj Engineering Sub-division, Surapur, [hereinafter referred to as Delinquent Government Officials, for short as 'DGOs 1 to 3' respectively ] and entrusted the departmental inquiry to this Institution.

2. This Institution by Nomination Order No. UPLOK-1/DE.203/2020 dated 17.11.202019 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them.

3. The DGOs were tried for the charge of making payment towards execution of works under drinking water scheme by creating fake records without getting the works executed, showing photographs of works already executed and thereby misappropriated the amount and caused loss to the Govt..

4. The Inquiry Officer (Additional Registrar of Enquiries-10) on proper appreciation of oral and documentary evidence has held that, the above charge against the DGO 1 Sri Hanumantha, Junior Engineer, Panchayath Raj Engineering Sub-division, Yadgiri, and DGO 2 Sri Hanumanthappa Ambali, Assistant Executive Engineer, Rural Water Drinking and Sanitization Sub-division, Surpur, is ' proved'.

5. Further, the Inquiry Officer (Additional Registrar of Enquiries- 10) has held that, the DGO-1 is responsible for causing loss of Rs.98,829/- and DGO.2 is responsible for causing loss of Rs.4,15,324/- to the State Exchequer.

6. Further, the Inquiry Officer has reported that the enquiry against DGO 3 Sri Mohammed Sadiq Ali Bakri, Junior Engineer, Panchayath Raj Engineering Sub-division, Surapur, has been quashed by Hon'ble KAT vide its order in A.No.20324/2021 dated 14.06.2021 and the said order of Hon'ble KAT has been challenged before Hon'ble High Court of Karnataka at Kalaburgi Bench in W.P.No.200035/2022 and further action would be taken as per the judgement in the said Writ petition.

7. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Enquiry Officer.

8. As per the information available in the file, DGO 1 Sri Hanamantha is due to retire from service on 31.07.2045. The date of retirement of DGO 2 Hanumanthappa Ambali is not available in the file.

9. Having regard to the nature of charge '*proved*' against the DGOs and considering the totality of circumstances,

i) it is hereby recommended to the Government to impose penalty of ' withholding two annual increments payable to DGO.1 with cumulative effect and also to recover a sum of Rs.98,829/- from the salary and allowances payable to DGO.1 Sri Hanamantha, Junior Engineer.

ii) it is hereby recommended to the Government to impose penalty of ' withholding two annual increments payable to DGO.2 with cumulative effect and also to recover a sum of Rs.4,15,324/- from the salary and allowances payable to DGO.2 Sri Hanumanthappa Ambali, Assistant Executive Engineer.

10. Action taken in the matter shall be intimated to this Authority.

Connected records are enclosed herewith.

16/2

**(JUSTICE B.S.PATIL)**
Upalokayukta,
State of Karnataka.